ಬೆಂಗಳೂರು ಡೇರಿಗೆ ದಿನಂಪ್ರತಿ ಸೋರುವಿಕೆಯಿಂದ ಆಗುತ್ತಿರುವ ನಷ್ಟ

2541 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಡೈರಿಯಲ್ಲಿ ದಿನಂಪ್ರತಿ ಸ್ಯಾಚೆಟ್ಸ್‌ಗಳ ಕಳಪೆ ಗುಣಮಟ್ಟದಿಂದ ಹಾಲು ಸೋರುವಿಕೆಯ ಶೇಕಡವಾರು ಪ್ರಮಾಣವೆಷ್ಟು?

ಆ) ಬೆಂಗಳೂರು ಡೇರಿಗೆ ದಿನಂಪ್ರತಿ ಈ ಸೋರುವಿಕೆಯಿಂದ ಆಗುತ್ತಿರುವ ನಷ್ಟ ಎಷ್ಟು?

ಇ) ಸ್ಯಾಚೆಟ್ಸ್‌ಗಳ ಗುಣಮಟ್ಟ ಹೆಚ್ಚಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಸವರಾಜ್ ಪಾಟೀಲ್ (ಪಶು ಸಂಗೋಪನಾ ಮತ್ತು ಪಶುವೈದ್ಯ ಸೇವಾ ಸಚಿವರು)

ಅ) ಶೇಕಡ 2 ರಷ್ಟು

ಆ) ಸುಮಾರು ರೂ. 4,000 ಗಳಷ್ಟು.

ಇ) ಸ್ಯಾಚೆಟ್ಸ್‌ಗಳ ಫಿಲಿಂಗ ಗುಣಮಟ್ಟವನ್ನು ಉತ್ತಮಪಡಿಸಲು ಹಾಗೂ ಫಿಲಂ ಸರಬರಾಜುದಾರರಿಗೆ ಉತ್ತಮ ಗುಣಮಟ್ಟದ ಫಿಲಂನ್ನು ಸರಬರಾಜು ಮಾಡುವಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಸಂಖ್ಯೆ

2497 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಕುಟುಂಬಗಳ ಸಂಖ್ಯೆ ಎಷ್ಟು? ಮತ್ತು ಸಾಗುವಳಿ ಮಾಡುತ್ತಿರುವ ವಿಸ್ತೀರ್ಣವೆಷ್ಟು?

ಆ) ಈ ಅನಧಿಕೃತ ಸಾಗುವಳಿದಾರರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ಪಂಗಡಗಳಿಗೆ ಸೇರಿದವರ ಸಂಖ್ಯೆ ಎಷ್ಟು?

ಇ) ಇವರಿಗೆ ಸಾಗುವಳಿ ಚೀಟಿಯನ್ನು ನೀಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) 1,911 ಕುಟುಂಬಗಳು.

1670-05 ಎಕರೆಗಳು.

ಆ) ಪರಿಶಿಷ್ಟ ಜಾತಿ-584

ಪರಿಶಿಷ್ಟ ವರ್ಗ-367

ಹಿಂದುಳಿದ ವರ್ಗದವರು-960

ಇ) ತಾಲ್ಲೂಕು ಮಟ್ಟದ ಅನಧಿಕೃತ ಸಾಗುವಳಿಗಳ ಸಕ್ರಮಗೊಳಿಸುವ ಸಮಿತಿಗಳು, ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 94ಎ ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಾವಳಿಗಳ ಪ್ರಕಾರ ಪರಿಶೀಲಿಸಿದ ನಂತರ ಅರ್ಹ ವ್ಯಕ್ತಿಗಳಿಗೆ ಸಾಗುವಳಿ ಚೀಟಿಯನ್ನು ನೀಡಲಾಗುತ್ತದೆ.